# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಇಂಡಿ.

**OS No**. 189/23

**PW**:1

**ದಿನಾಂಕ 23.03.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ರಿಂದ 5 ಪ್ರತಿವಾದಿ ಪರ ಶ್ರೀ ARK ವಕೀಲರಿಂದ:**

ನಮ್ಮ ತಂದೆಗೆ ನಾವು 4 ಜನ ಮಕ್ಕಳು. ನನಗೆ ಮದೆವೆಯಾಗಿರುತ್ತದೆ. ನನ್ನ ಮದುವೆಯಾಗಿ ಈಗ್ಗೆ 38 ವರ್ಷಯಾಗಿರುತ್ತದೆ. ನನಗೆ ಮಕ್ಕಳು ಇಲ್ಲ. ನನ್ನ ಗಂಡ ಮರಣಹೊಂದಿರುತ್ತಾರೆ. ನನ್ನ ಗಂಡ ಮರಣ ಹೊಂದಿ ಈಗ್ಗೆ 25 ವರ್ಷ ಆಗಿರುತ್ತದೆ. ನನ್ನ ಗಂಡ ಮರಣ ಹೊಂದಿದ ನಂತರ ನಾನು ದುಃಖಪ್ತರಾಗಿ ನನ್ನ ತವರು ಮನೆಯಲ್ಲಿ ಇರುತ್ತೇನೆ ಎಂದರೆ ಸರಿ. ನಾನು ಸೋಮನಿಂಗಪ್ಪ ಇವರ ಮನೆಯಲ್ಲಿ ಇದ್ದೇನು ಎಂದರೆ ಸರಿಯಲ್ಲ. ನಾನು ವಿಜಯಪುರದಲ್ಲಿ ಸೋಮನಿಂಗಪ್ಪ ಇವರ ಮನೆಯಲ್ಲಿ ಇದ್ದು ಅವರು ನನ್ನ ಯೋಗ ಕ್ಷೇಮವನ್ನು ನೋಡಿಕೊಂಡಿದ್ದರು ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯು ಮರಣ ಹೊಂದಿ 7 ವರ್ಷಗಳು ಹಾಗೂ ನನ್ನ ತಾಯಿ ಮರಣ ಹೊಂದಿ 10 ವರ್ಷಗಳು ಆಗಿರುತ್ತದೆ. 2015-16 ನೇ ಇಸ್ವಿಯಲ್ಲಿ ನನ್ನ ತಂದೆಯು ಪಂಚರ ಸಮಕ್ಷಮ ನಮಗೆ ವಾಟ್ನಿ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿ. ಸದರಿ ವಾಟ್ನಿಯು MRH -58 ಎಂದು ಮಂಜೂರು ಆಗಿರುತ್ತದೆ ಅಂದರೆ ಸರಿ. ವಾಟ್ನಿಯಂತೆ ನಾವು ಕಬ್ಜೆಯಲ್ಲಿ ಇರುತ್ತವೆ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ವಾಟ್ನಿಯಾಗಿದ್ದರು ಸಹ 1 ಮತ್ತು 2 ನೇ ಪ್ರತಿವಾದಿಯವರ ಮಾತು ಕೇಳಿ 3 ಮತ್ತು 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕ್ನುವ ದುರದ್ದೇಶದಿಂದ ಈ ದಾವೆಯ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯು ಮರಣ ಹೊಂದಿದ ನಂತರ ಕುಟುಂಬದ ಎಲ್ಲ ಸದಸ್ಯರ ಜವಾಬ್ದಾರಿಯನ್ನು ಸೋಮನಿಂಗ ಇವರು ವಹಿಸಿಕೊಂಡಿರುತ್ತಾರೆ ಅಂದರೆ ಸರಿ.

ಸೋಮನಿಂಗ ಇವರು ಆಸ್ತಿಗೆ ಸಾಕಷ್ಟು ಖರ್ಮ ಮಾಡಿ ಸುಧಾರಣೆ ಮಾಡಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. 1 ಮತ್ತು 2 ನೇ ಪ್ರತಿವಾದಿಯರು ಸಾಕಷ್ಟು ಸಾಲವನ್ನು ಮಾಡಿಕೊಂಡಿದ್ದು ಅದನ್ನು ಸೋಮನಿಂಗ ಇವರು ಪಾವತಿ ಮಾಡಿರುತ್ತಾರೆ ಅಂದರೆ ಸರಿಯಲ್ಲ.

1 ಮತ್ತು 2 ನೇ ಪ್ರತಿವಾದಿಯರ ಸಾಲವನ್ನು ಸೋಮನಿಂಗ ರವರು ತೀರಿಸಿದ್ದು ಮತ್ತು ನನ್ನ ಯೋಗ ಕ್ಷೇಮವನ್ನು ಅವರೇ ನೋಡಿರುವ ಕಾರಣ ಸೋಮನಿಂಗ ಇವರಿಗೆ ಹೆಚ್ಚಿಗೆ ಆಸ್ತಿಯನ್ನು ನೀಡಿರುತ್ತಾರೆ ಅಂದರೆ ಸಾಕ್ಷಿಯು ನನ್ನ ಪಾಲು ಎಲ್ಲಿ ಹೋಯಿತು ಎಂದು ನುಡಿಯುತ್ತಾರೆ. ನನ್ನ ಮದುವೆಯ ಸಲುವಾಗಿ 6 ಎಕರೆ ಆಸ್ತಿಯನ್ನು ಮಾರಾಟ ಮಾಡಿ ನನ್ನ ತಂದೆಯವರು ನನ್ನ ಮದುವೆಯನ್ನು ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನಮ್ಮ ತಂದೆಗೆ ಅವರ ತಂದೆಯ ಕಡೆಯಿಂದ 22 ಎಕರೆ ಆಸ್ತಿ ಬಂದಿತ್ತು. ಸೋಮನಿಂಗ ಇವರಿಗೆ ನಾನು ಆಸ್ತಿ ಬೇಡ ಅದಕ್ಕೆ ಪ್ರತಿಯಾಗಿ ನನಗೆ 10 ತೋಲೆ ಬಂಗಾರ ಮತ್ತು ಹಣವನ್ನು ಕೊಡು ಎಂದು

ಕೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ 2 ಎಕರೆ ಚಿಲ್ಲರೆ ಆಸ್ತಿಯನ್ನು ನಮ್ಮ ಅಣ್ಣ ಕೊಟ್ಟಿರುತ್ತಾನೆ ಅಂದರೆ ಸರಿಯಲ್ಲ. ನನಗೆ ಎಲ್ಲಾ ಆಸ್ತಿಯನ್ನು ಕೊಟ್ಟಿದ್ದರು ಸಹ 1 ಮತ್ತು 2 ನೇ ಪ್ರತಿವಾದಿಯರ ಮಾತು ಕೇಳಿ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಅಂದರೆ ಸರಿಯಲ್ಲ. ಸೋಮನಿಂಗಪ್ಪ ಇವರಿಗೆ ಹೊಲ ಹೆಚ್ಚಿಗೆ ಇದೆ ಎಂದು ನಮ್ಮ ತಂದೆಯವರು 1 ಮತ್ತು 2 ನೇ ಪ್ರತಿವಾದಿಯರಿಗೆ ಮನೆ ಮತ್ತು ಅಂಗಡಿಯನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಪಾಲು ನನಗೆ ಬೇಕು ಎಂದು ನುಡಿಯುತ್ತಾರೆ. ನನ್ನ ಹೆಸರಿನಲ್ಲಿ ಜಮೀನು ಇರುತ್ತದೆ.

3 ರಿಂದ 5 ನೇ ಪ್ರತಿವಾದಿಯರು 7 ಎಕರೆ ಜಮೀನನ್ನು ಸಾಗುವಳಿ ಮಾಡಿಸುತ್ತಿದ್ದಾಗ ನಾನು ತಕರಾರು ಮಾಡಿದ್ದರಿಂದ ಆ ಜಮೀನು ಪಾಳು ಬಿದ್ದೀರುತ್ತದೆ ಎಂದರೆ ಸಾಕ್ಷಿಯು ನನಗೆ ನನ್ನ ಪಾಲು ಕೊಟ್ಟು ನೀವು ನಿಮ್ಮ ಪಾಲನ್ನು ಮಾಡಿಕೊಳ್ಳಿ ಎಂದು ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಾನು , 1 ಮತ್ತು 2 ನೇ ಪ್ರತಿವಾದಿಯರು 3 ರಿಂದ 5 ನೇ ಪ್ರತಿವಾದಿಯರ ಕಬ್ಜಾವಹಿವಾಟಿಗೆ ತೊಂದರೆ ನೀಡುತ್ತಿದ್ದೇನು ಎಂದರೆ ಸರಿಯಲ್ಲ.

**<u>ಮರು ವಿಚಾರಣೆ: ಇಲ್ಲ:</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ. ಸರಿ ಇದೆ.

ಸಹಿ/-

ಜೆ.ಎಂ.ಎಫ್.ಸಿ. ನ್ಯಾಯಾಲಯ

ಇಂಡಿ.